4) ಹಾಗಿದ್ದಲ್ಲಿ, ಈ ಮೇಲ್ಕಂಡ ಭೂಮಿಯ ಭೂ ಮಾಲೀಕರಿಗೆ ಸರ್ಕಾರ ಪರಿಹಾರ ನೀಡಿದೆಯೇ? (ವಿವರ ನೀಡುವುದು)

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-

1) ಹೌದು.

2) ದಿನಾಂಕ 1-4-1991 ರಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಸುಬರ್ದಿಗೆ ಭೂಮಿಯನ್ನು ನೀಡಲಾಗಿದೆ.

3) ಬಸವ ಕಲ್ಯಾಣ ತಾಲ್ಲೂಕು ತ್ರಿಪಾಂತ ಗ್ರಾಮದಲ್ಲಿ ಅಂತಿಮವಾಗಿ 91-09 ಎಕರೆ ಜಮೀನುಗಳನ್ನು ಭೂ ಸ್ವಾಧೀನಪಡಿಸಿ ಕೊಳ್ಳಲಾಗಿದೆ. 5-36 ಎಕರೆ ಹೆಚ್ಚುವರಿ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಳ್ಳಲು ಮಂಡಳಿಯು ತೀರ್ಮಾನ ತೆಗೆದುಕೊಂಡಿದ್ದು ಭೂ ಸ್ವಾಧೀನ ನಡವಳಿಕೆಯನ್ನು ಕೈಗೊಳ್ಳಲಾಗಿದೆ.

4) ಸದರಿ ಜಮೀನಿನ ಭೂ ಮಾಲೀಕರುಗಳಿಗೆ ಒಪ್ಪಂದದ ಪ್ರಕಾರ ಎಕರೆ ಒಂದಕ್ಕೆ ರೂ. 55,000 ದಂತೆ ಒಟ್ಟು ರೂ. 50,17,375.00 ಗಳನ್ನು ಭೂ ಮಾಲೀಕರುಗಳಿಗೆ ಕೊಡಲು ವಿಶೇಷ ಭೂಸ್ವಾಧೀನ ಅಧಿಕಾರಿಗಳು ಗುಲ್ಬರ್ಗಾ ಇವರಿಗೆ ದಿನಾಂಕ 20-3-1991 ರಂದು ಬಿಡುಗಡೆ ಮಾಡಲಾಗಿ ಸದರಿ ಮೊಬಲಗನ್ನು ಭೂ ಮಾಲೀಕರುಗಳಿಗೆ ಹಂಚಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ಕೈಗಾರಿಕಾ ಕೇಂದ್ರದ ವಿಸ್ತೀರ್ಣ

277 (335) ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ):- ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೋಲಾರ ಜಿಲ್ಲೆಯಲ್ಲಿ ಕೈಗಾರಿಕಾ ಕೇಂದ್ರದ ಒಟ್ಟು ವಿಸ್ತಾರವೆಷ್ಟು?

ಆ) ಎಷ್ಟು ಕೈಗಾರಿಕೆಗಳು ಈವರೆಗೆ ಪ್ರಾರಂಭವಾಗಿವೆ?

ಇ) ಎಷ್ಟು ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ?

ಈ) ಈ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು):-

ಅ) ಕೋಲಾರ ಜಿಲ್ಲೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಬಿವೃದ್ಧಿ ಮಂಡಲಿಯ 701.44 ಎಕರೆ ವಿಸ್ತೀರ್ಣ ಭೂಮಿಯನ್ನು ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿದೆ. ಹಾಗೆಯೇ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮವು ಈ ಪೈಕಿ ಹಾಗೂ ಇತರ ಪ್ರದೇಶದಲ್ಲಿ 104.77 ಎಕರೆ ವಿಸ್ತೀರ್ಣವನ್ನು ಕೈಗಾರಿಕಾ ವಸಾಹತುವನ್ನು ಸ್ಥಾಪಿಸಿದೆ.

ಆ) ಕೋಲಾರ ಜಿಲ್ಲೆಯಲ್ಲಿ ಈ ತನಕ ಒಟ್ಟು 14 ಮಧ್ಯಮ ಮತ್ತು ಭಾರಿ ಕೈಗಾರಿಕೆಗಳು ಹಾಗೂ 4777 ಸಣ್ಣ : ಅತಿ ಸಣ್ಣ ಕೈಗಾರಿಕೆಗಳು ಸ್ಥಾಪಿತವಾಗಿವೆ.

ಇ) ಇಲ್ಲಿಯವರೆಗೆ 609 ಸಣ್ಣ : ಅತಿ ಸಣ್ಣ ಕೈಗಾರಿಕೆಗಳು ಮುಚ್ಚಲಾಗಿದೆ.

ಈ) ಕರ್ನಾಟಕ ಸರ್ಕಾರವು ಹಿಂದುಳಿದ ಪ್ರದೇಶದ ಕೈಗಾರಿಕೆಗಳ ಅಭಿವೃದ್ಧಿಗೋಸ್ಕರ ಹೊಸ ಕೈಗಾರಿಕಾ ನೀತಿಯ ಸವಲತ್ತು ಮತ್ತು ರಿಯಾಯಿತಿಗಳನ್ನು ಘೋಷಿಸಿದೆ. ಕೋಲಾರ ಜಿಲ್ಲೆಯ ಹಿಂದುಳಿದ ಪ್ರದೇಶವು ವಲಯ-II ಮತ್ತು III ರಲ್ಲಿ ಸೇರಿದ್ದು ಅಲ್ಲಿಯ ಕೈಗಾರಿಕೆಗಳು ಅನ್ಯ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಸಂಗಡ ಶೇಕಡಾ 15 ರಿಂದ 25 ರವರೆಗೆ ಬಂಡವಾಳ ಸಹಾಯಧನ ಪಡೆಯಲು ಅರ್ಹವಾಗಿದೆ.